# ಕರ್ನಾಟಕ ವಿಧಾನ ಪರಿಷತ್ತು
## 149ನೇ ಅಧಿವೇಶನ 2023

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 226 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಲೋಕೋಪಯೋಗಿ ಇಲಾಖೆ ಬೆಂಗಳೂರು-ಮಾಗಡಿ ಹೆದ್ದಾರಿ 85ರಲ್ಲಿ ಚತುಷ್ಪಥ ರಸ್ತೆ ನಿರ್ಮಾಣ ಕಾಮಗಾರಿಯು ಈಗ ಯಾವ ಹಂತದಲ್ಲಿದೆ; | ಏಷಿಯನ್ ಡೆವಲೆಪ್‌ಮೆಂಟ್ ಬ್ಯಾಂಕ್ ಸಾಲದ ನೆರವಿನೊಂದಿಗೆ ಕೆಶಿಪ್-3 ರಡಿಯಲ್ಲಿ ಪ್ಯಾಕೇಜ್-1 ರಡಿ 1ಸಿ ಬೆಂಗಳೂರು (ನೈಸ್ ರಸ್ತೆ) ಜಂಕ್ಷನ್‌ನಿಂದ- ಮಾಗಡಿ ವರೆಗೆ (ಚತುಷ್ಪಥ ರಸ್ತೆ 36.7 ಕಿ.ಮೀ) ಮತ್ತು ಮಾಗಡಿಯಿಂದ ರಾಷ್ಟ್ರೀಯ ಹೆದ್ದಾರಿ 75 ರವರೆಗೆ (ದ್ವಿಪಥರಸ್ತೆ 14 ಕಿ.ಮೀ) ಒಟ್ಟಾರೆ 50.7 ಕಿ.ಮೀ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>ರಿಯಾಯಿತಿದಾರರಾದ ಮೆ॥ ಕೆ.ಎನ್. ಹೈವೇಸ್, ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ರವರು ದಿನಾಂಕ: 01.07.2020 ರಂದು ಕಾಮಗಾರಿಯನ್ನು ಪ್ರಾರಂಭಿಸಿದ್ದು, ಇಲ್ಲಿಯವರೆಗೆ ಒಟ್ಟಾರೆ ಶೇಕಡ 55% ರಷ್ಟು ಪ್ರಗತಿ ಸಾಧಿಸಿರುತ್ತಾರೆ.<br>ಪ್ರಸ್ತುತವಾಗಿ ರಸ್ತೆಯ ಅಕ್ಕ ಪಕ್ಕದ ಮರಗಳನ್ನು ತೆರವುಗೊಳಿಸಿ, ವಿದ್ಯುತ್ ಕಂಬಗಳನ್ನು ಸ್ಥಳಾಂತರಗೊಳಿಸಿ, ಚರಂಡಿ ನಿರ್ಮಾಣ ಕೈಗೊಂಡು ರಸ್ತೆಯ ಇತರೆ ಕೆಲಸಗಳು ಪ್ರಗತಿಯಲ್ಲಿರುತ್ತದೆ. ಅಲ್ಲದೆ, ರಸ್ತೆಯ ವ್ಯಾಪ್ತಿಯಲ್ಲಿ ಬರುವ ಸೇತುವೆಗಳು, ಅಡ್ಡಮೋರಿಗಳು ಸಹ ಪ್ರಗತಿಯಲ್ಲಿದ್ದು, ಇಲ್ಲಿಯವರೆಗೆ ಈ ಕಾಮಗಾರಿಯ ಆಯ್ದ ಭಾಗಗಳಲ್ಲಿ 27.89 ಕಿಮೀ ನಷ್ಟು ರಸ್ತೆಯ ಡಾಂಬರೀಕರಣ (DBM) ಪೂರ್ಣಗೊಂಡಿರುತ್ತದೆ. ಬಾಕಿ ಉಳಿದ ರಸ್ತೆ ಅಭಿವೃದ್ಧಿ ಕಾರ್ಯ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. |
| ಆ) | ಬೆಂಗಳೂರು-ಮಾಗಡಿ ಹೆದ್ದಾರಿ 85ರಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಚತುಷ್ಪಥ ರಸ್ತೆ ಹಾದು ಹೋಗುವ ಚೋಳನಾಯಕನಹಳ್ಳಿ ಮತ್ತು ತಾವರೆಕೆರೆ ಬಳಿಯಲ್ಲಿನ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಈಗ ಯಾವ ಹಂತದಲ್ಲಿದೆ; ವಿಳಂಬಕ್ಕೆ ಕಾರಣವೇನು; | ಕೋವಿಡ್-19 ಹಾಗೂ ತೀವ್ರ ಅನಿರೀಕ್ಷಿತ ಮಳೆ ಮತ್ತು ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾದಕಾರಣ ಹಾಗೂ ಸದರಿ ಮೇಲ್ಸೇತುವೆಗೆ ವಿಸ್ತೃತಾ ಯೋಜನಾ ವರದಿ (DPR) ನಲ್ಲಿ ಇದ್ದ 270 ಮೀ ವಯಾಡಕ್ಟ್ ಅನ್ನು ಸ್ಥಳಿಯ ಸಾರ್ವಜನಿಕರ ಬೇಡಿಕೆಯಿಂದಾಗಿ 990 ಮೀ ವಯಾಡಕ್ಟಗೆ ಪರಿಷ್ಕರಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯ (Change of Scope) ಆದೇಶವನ್ನು ದಿನಾಂಕ:17.01.2023 ರಂದು ಪಡೆಯಲಾಗಿದ್ದು, ಈ ಕಾಮಗಾರಿಯನ್ನು ದಿನಾಂಕ:16.01.2024 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಸದರಿ ಕಾಮಗಾರಿಯನ್ನು Change of Scope ರಂತೆ ಪ್ರಾರಂಭಿಸಲು ಕ್ರಮಕೈಗೊಳ್ಳಲಾಗಿರುತ್ತದೆ. |

| | | |
|---|---|---|
| ಇ) | ಈ ಕಾಮಗಾರಿಗಳು ಪೂರ್ಣಗೊಳ್ಳಲು ಎಷ್ಟು ಸಮಯಾವಕಾಶ ಬೇಕಾಗಬಹುದು? | ರಿಯಾಯಿತಿದಾರರು ಕರಾರಿನಂತೆ ಕಾಮಗಾರಿಯನ್ನು ದಿನಾಂಕ: 01.07.2020 ರಂದು ಪ್ರಾರಂಭಿಸಲಾಗಿದ್ದು, 24 ತಿಂಗಳು ಅವಧಿ ಅಂದರೆ ದಿನಾಂಕ: 30.06.2022ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ.<br><br>ಕೋವಿಡ್-19ರ ಸಾಂಕ್ರಮಿಕ ರೋಗದಿಂದಾಗಿ ಭೂಸ್ವಾಧೀನ ವಿಳಂಬ ಮತ್ತು ಅನಿರೀಕ್ಷಿತ ಮಳೆಯ ಕಾರಣದಿಂದಾಗಿ, ಅರಣ್ಯ ಭೂಮಿ ತೆರವಿಗೆ ಸಂಬಂಧಿಸಿದ ಪ್ರಮಾಣ ಪತ್ರ ಪಡೆಯಲು ವಿಳಂಬದಿಂದಾಗಿ, ಮೇಲೆ ವಿವರಿಸಿರುವ ಮೇಲ್ಸೇತುವೆ ಕಾಮಗಾರಿಯ Change of Scope ಅನುಮೋದನೆ ಪಡೆಯಲು ವಿಳಂಬವಾಗಿದ್ದು, ಸದರಿ ರಸ್ತೆ ಹಾಗೂ ಸೇತುವೆ ಕಾಮಗಾರಿಯನ್ನು ದಿನಾಂಕ: 16-01-2024 ರ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು. |

ಸಂಖ್ಯೆ. ಲೋಇ E- 60 ಇಎಪಿ 2023

(ಸಿ.ಸಿ. ಪಾಟೀಲ್)
ಲೋಕೋಪಯೋಗಿ ಸಚಿವರು